ಸೇವಾ ವಿಚಾರ

A-1041.

ಸರಸ್ವತಿ ಭಂಡಾರ
ಬೆಂಗಳೂರು-೧೮.

R N16
1041

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY

## ವಿಶೇಷ ಸೂಚನೆ.

---

ನಮ್ಮ ಸೋದರಿಯರ ಉಪಯೋಗಕ್ಕಾಗಿ 1915ನೇ ಜೂನ್ ತಿಂಗಳಲ್ಲಿ ಸ್ತ್ರೀಶಾಖೆಯಲ್ಲಿ ಕೊಟ್ಟ 'ವಿದ್ಯಾವಿಚಾರ' ಮತ್ತು 1916 ಮೇತಿಂಗಳಲ್ಲಿ ಮಹಿಳಾಸೇವಾಸಮಾಜದಲ್ಲಿ ಕೊಟ್ಟ 'ಸೇವಾವಿಚಾರ' ಈ ಎರಡು ಉಪನ್ಯಾಸಗಳನ್ನೂ ಅಪೇಕ್ಷಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿ, ಅಂಚೆಯ ಮೂಲಕ ಪಡೆಯಬಹುದು.

ಪ್ರಥಮ ಮುದ್ರಣ ೧೦೦೦ಪ್ರತಿಗಳು

ಇದು

ಸತೀಹಿತೈಷಿಣೀ ಮಾತೃಮಂದಿರದಲ್ಲಿ ಪ್ರಕಟಿಸಲ್ಪಟ್ಟಿದೆ.

Digitized by ROJA MUTHIAH RESEARCH LIBRARY

## ಮ ಹಿ ಳಾ ಸೇ ವಾ ಸ ಮಾ ಜ,

### ಬೆ ಂ ಗ ಳೂ ರು.

ಇದೇ 1916 ನೇ ಇಸವಿ ಮೇ ತಾರೀಖು 20 ನೇ ಸೋಮವಾರ ಸಾಯಂಕಾಲ ಬೆಂಗಳೂರು ಸಿಟಿ ಥಿಯಸಾಫಿಕಲ್ ಸೊಸೈಟಿಯ ಮಂದಿರದಲ್ಲಿ ನಂಜನಗೂಡಿನಿಂದ ಬಂದಿದ್ದ ಶ್ರೀಮತಿ ತಿರುಮಲಮ್ಮನವರು ಸ್ತ್ರೀಯರ ಉಪಯೋಗಾರ್ಥವಾಗಿ ಸೇವಾವಿಷಯವಾಗಿ ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಕೊಟ್ಟರು.

ಮಹಿಳಾಸೇವಾಸಮಾಜದ ಪ್ರೆಸಿಡೆಂಟರಾದ ಶ್ರೀಮತಿ, ಸೌ|| ಪಾರ್ವತಿ ಅಮ್ಮನವರು ಅಗ್ರಸ್ಥಾನವನ್ನು ವಹಿಸಿದರು. ಉಪನ್ಯಾಸದ ಪ್ರಾರಂಭದಲ್ಲಿ ಅಗ್ರಾಸನಾಸೀನರು ಹೇಳಿದ್ದೇನಂದರೆ.—

" ಸಹೋದರಿಗಳಿರಾ !

ಈ ದಿವಸ ಉಪನ್ಯಾಸವನ್ನು ಕೊಡಲು ಒಪ್ಪಿಕೊಂಡು ಬಂದಿರುವ ಶ್ರೀಮತಿ ತಿರುಮಲಮ್ಮನವರು ಯಾರೆಂದು ನಾನು ತಿಳಿಸಬೇಕಾಗಿಲ್ಲ. ಅವರು, ಭಾರತಮಹಿಳೆಯರಿಗೆ ಮಾಡುತ್ತಿರುವ ಉಪಕಾರವನ್ನು ಅವರು ಬರೆದು ಪ್ರಚುರಪಡಿಸಿರುವ ಪುಸ್ತಕಗಳು ಉದ್ಘೋಷಿಸುತ್ತಿವೆ. ಆ ಪುಸ್ತಕಗಳನ್ನು ತಮ್ಮಗಳಲ್ಲನೇಕರು ಓದಿರಬಹುದು. ಅವರು ಈಗ 'ಸೇವಾ' ವಿಷಯವಾಗಿ ಕೊಡತಕ್ಕ ಉಪನ್ಯಾಸವನ್ನು ಮನಕೊಟ್ಟು ಕೇಳಬೇಕಾಗಿ ಕೋರುತ್ತೇನೆ. "

.................................................................



(ಉಪನ್ಯಾಸವಾದ ಬಳಿಕ ಪ್ರೆಸಿಡೆಂಟರವರು ಹೇಳಿದುದು.)

ಪ್ರಿಯಸಹೋದರಿಗಳಿರಾ !

ಇದುವರಿವಿಗೆ ಶ್ರೀಮತಿ ತಿರುಮಲಮ್ಮನವರು ತಮ್ಮ ಉಪನ್ಯಾಸದಲ್ಲಿ ತಿಳಿಸಿದ ಅಂಶಗಳನ್ನು ಪುನಃ ನಾನು ಸೂಚಿಸಬೇಕಾಗಿಲ್ಲ. ಅವರು ಹೇಳಿದ ಸಂಗತಿಗಳೆಲ್ಲಾ ತಮ್ಮಗಳ ಮನದಲ್ಲಿ ಚೆನ್ನಾಗಿ ನಾಟಿರಬಹುದೆಂದು ಊಹಿಸುತ್ತೇನೆ. ಆದರೂ, ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. 'ಸೇವಾ' ಎಂಬ ಮಾತಿಗೆ ಕೈಂಕರ್ಯವೆಂದು ಅರ್ಥ. ಮನುಷ್ಯವರ್ಗಕ್ಕೆ ಸೇರಿದವರೆಲ್ಲರೂ ಮಾಡಬೇಕಾಗಿದೆ. ಅದನ್ನು ತಿಳಿದ ಜ್ಞಾನಿಗಳು ಭೇದಾಭೇಧವಿಲ್ಲದೆ, ಪ್ರಪಂಚಕ್ಕೆಲ್ಲಾ ಉಪಕಾರಮಾಡುತ್ತಿರುವುದೂ, ಹೀಗೆ ಮಾಡುವುದು ನಮ್ಮಂತಹ ಸಾಧಾರಣ ಜನರಿಗೆ ಅಸಾಧ್ಯವಾದರೂ, ನಮ್ಮ ಮಾತೃಭೂಮಿಗಾದರೂ ನಾವು ಸೇವೆಯನ್ನು ಮಾಡತಕ್ಕದ್ದು ಅವಶ್ಯಕವೆಂದೂ, ಅದರಲ್ಲೂ ಸ್ತ್ರೀಯರು ಮುಖ್ಯವಾಗಿ ಸೇವಾತತ್ಪರರಾಗಿರಬೇಕೆಂದೂ, ಮುಂತಾದ ಅನೇಕ ಮುಖ್ಯಾಂಶಗಳನ್ನು ಉಪನ್ಯಾಸಕರು ಬಹಳ ವಿಶದವಾಗಿ ತಿಳಿಯಪಡಿಸಿದರು. ಅದಕ್ಕೆ ಸೀತಾ, ಸಾವಿತ್ರಿ, ದಮಯಂತಿ ಇವರೇ ಮುಂತಾದ ಸ್ತ್ರೀಯರುಗಳನ್ನು ದೃಷ್ಟಾಂತವಾಗಿ ಸೂಚಿಸಿರುತ್ತಾರೆ. ಮಾತೃಭೂಮಿಗೆ ಸೇವಾಮಾಡುವ ಉದ್ದೇಶದಿಂದ ಏರ್ಪಟ್ಟಿರುವ ಮಹಿಳಾಸೇವಾಸಮಾಜವು ಮಾಡುತ್ತಿರುವ ಕೆಲಸವನ್ನೂ ಮತ್ತು, ಅದಕ್ಕೆ ಪ್ರೆಸಿಡೆಂಟಾದ ನನ್ನನ್ನೂ ಸ್ತೋತ್ರಮಾಡಿರುತ್ತಾರೆ. ಸಮಾಜವು ಉತ್ತರೋತ್ತರ ಅಭಿವೃದ್ಧಿಹೊಂದಬೇಕೆಂಬುವ ಅವರ ಆಶಯದಲ್ಲಿ ನಾವುಗಳೆಲ್ಲರೂ

Digitized by ROJA MUTHIAH RESEARCH LIBRARY

ಭಾಗಿಗಳಾಗಿಯೇ ಇರುತ್ತೇವೆ. ಆದರೆ ಅದರ ಮೂಲಕ ನಡೆಯುವ ಕೆಲಸಗಳನ್ನು ನಾನೊಬ್ಬಳೇ ಮಾಡಲು ಸಾಧ್ಯವಿಲ್ಲದ್ದರಿಂದ ಅವರ ಸ್ತೋತ್ರವಚನವು ನನಗೆ ಒಬ್ಬಳಿಗೆ ಮಾತ್ರವೇ ಸಲ್ಲತಕ್ಕದ್ದಲ್ಲ. ಈ ಸಮಾಜದ ಸೆಕ್ರಿಟೆರಿಯವರೂ, ಅಭಿಮಾನಿಗಳೂ ಪ್ರತಿಸಾಮಾಜಿಕರೂ ಇನ್ನೂ ಸಮಾಜದ ಉದ್ದೇಶವನ್ನು ಸಾರ್ಥಕಪಡಿಸಲು ಪ್ರಯತ್ನಪಡ ತಕ್ಕ ಮಹನೀಯರುಗಳೆಲ್ಲಾ ಈ ಸ್ತೋತ್ರಕ್ಕೆ ಅರ್ಹರಾಗಿರುತ್ತಾರೆ.

ಒಳ್ಳೆಯಕೆಲಸವನ್ನು ಪ್ರಾರಂಭಮಾಡುವಾಗ ಎಲ್ಲಾ ಜನಗಳ ಮೆಚ್ಚಿಗೆ ಪಡೆಯುವುದು ಅಸಾಧ್ಯವಾದ ವಿಷಯವೇ. ಇದಕ್ಕೆ ದೃಷ್ಟಾಂತವಾಗಿ ಸಹೋದರಿ ತಿರುಮಲಮ್ಮನವರು ಭಾರತ ಮಹಿಳೆಯರ ಉಪಯೋಗಕ್ಕಾಗಿ ಅವರ ಜೀವಮಾನವೆಲ್ಲಾ ವೆಚ್ಚಮಾಡುತ್ತಿದ್ದರೂ ಕೆಲವರು ಹೆಂಗಸರಾದ ಅವರಿಂದ ಈ ಪುಸ್ತಕಗಳು ಬರೆಯುವುದು ಅಸಾಧ್ಯವೆಂದೂ, ಇತರರ ಸಹಾಯದಿಂದ ಬರೆಯುತ್ತಿರುವರೆಂದೂ ದೋಷಾರೋಪಣೆಮಾಡುತ್ತಾರೆ. ಪೂರ್ವಕಾಲದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಸ್ತ್ರೀಗಳಲ್ಲಿ ಒಬ್ಬಳಾದ ಸುಭದ್ರೆಯು, ಅರ್ಜುನನಿಗೆ ಸಹಾಯವಾಗಿ ರಥವನ್ನು ನಡೆಯಿಸಲಿಲ್ಲವೆ? ಶ್ರೀಕೃಷ್ಣನ ಹೆಂಡತಿಯಾದ ಸತ್ಯಭಾಮೆಯು, ರಾಕ್ಷಸರಿಗೆ ಎದುರಾಗಿ ನಿಂತು ಯುದ್ಧಮಾಡಲಿಲ್ಲವೆ ? ದೇವದಾನವರ ಯುದ್ಧದಲ್ಲಿ, ಕೈಕೇಯಿಯು ದಶರಥನಿಗೆ ಸಹಾಯವಾಗಿದ್ದು, ಆತನಿಂದ ಎರಡು ವರಗಳನ್ನು ಪಡೆದಿರಲಿಲ್ಲವೆ ? ಈಕಾಲದಲ್ಲಿಯೂ ವಿಕ್ಟೋರಿಯಾ ಮಹಾರಾಜ್ಞಿಯವರು ಇಂಡಿಯಾ ದೇಶಕ್ಕೆ ಚಕ್ರವರ್ತಿನಿಯಾಗಿದ್ದು ರಾಜ್ಯಭಾರವನ್ನು ನಡೆಸಲಿಲ್ಲವೆ? ಇಂಥಾ ದೊಡ್ಡ ಕೆಲಸಗಳೆಲ್ಲಾ ಸ್ತ್ರೀಯರುಗಳಿಂದ ಆಗಬಹುದಾದರೆ, ಗ್ರಂಥಗಳನ್ನು



ಬರೆಯುವದಕ್ಕೆ ಶಕ್ತಿಯಿಲ್ಲವೆಂಬುದು ನಂಬತಕ್ಕದ್ದಲ್ಲ. ಆದಕಾರಣ ನಮ್ಮಗಳಿಗಾಗಿ ಎಷ್ಟೋಶ್ರಮಪಟ್ಟು.........ಉಪಯೋಗಕರವಾದ ಉಪನ್ಯಾಸವನ್ನು ಕೊಟ್ಟು.........ತಿರುಮಲಮ್ಮನವರಿಗೆ ನಾವೆಷ್ಟು ಕೃತಜ್ಞರಾಗಿದ್ದರೂ ಸಾಲದು. "ದೇವರು, ಅವರಿಗೆ ಆರೋಗ್ಯ...ವನ್ನು ಕೊಟ್ಟು ಹೀಗೆಯೇ ಉತ್ತರೋತ್ತರ ಪ್ರಪಂಚಕ್ಕೆ ಉಪಕಾರಮಾಡಲು ಶಕ್ತಿಯನ್ನುಕೊಟ್ಟು ಕಾಪಾಡಲಿ''ಎಂದು ಪರಮಾತ್ಮನನ್ನು ಬೇಡುತ್ತೇನೆ. ಮತ್ತು—ಸಭೆಗೆ ಬಂದಿರುವ ಸಹೋದರಿಗಳಿಗೆಲ್ಲಾ ನಾನು ಅನೇಕ ವಂದನೆಗಳನ್ನು ಸಮರ್ಪಿಸುತ್ತೇನೆ"

(ಚಕ್ರವರ್ತಿ ಸಾರ್ವಭೌಮರಿಗೂ, ಶ್ರೀಮನ್ ಮಹಾರಾಜರು, ಮತ್ತು ಶ್ರೀಮಾನ್ ಯುವರಾಜರವರಿಗೂ ಶ್ರೇಯಃಪ್ರಾರ್ಥನೆಗಳಾಗಿ ಮಂಗಳಗೀತೆಗಳೊಡನೆ ಸಭಾಕಾರ್ಯವು ಸಾಂಗವೆನ್ನಿಸಿತು.)

## ಕೃತಜ್ಞತೆ

ಮೇಲೆ ಹೇಳಿರುವ ವಿಷಯಗಳನ್ನು ಯಥಾವತ್ತಾಗಿ ಬರೆದು ತಮ್ಮ ಸ್ವಹಸ್ತಾಕ್ಷರದ ಪತ್ರದೊಡನೆ ನಮ್ಮಲ್ಲಿಗೆ ಪ್ರಕಟಿಸಲು ಕಳುಹಿಕೊಟ್ಟ ನಮ್ಮ ಸನ್ಮಾನನೀಯಭಗಿನಿಯರಾದ ಶ್ರೀ|| ಸೌ|| ಪಾರ್ವತಾಂಬೆಯವರ ಸೌಜನ್ಯವು ನಮಗೆ ಚಿರಸ್ಮರಣೀಯವಾಗಿರುವುದು.

(ಪ್ರಕಾಶಕರು)

Digitized by ROJA MUTHIAH RESEARCH LIBRARY

ಶ್ರೀರಾಮಶ್ಶರಣಮ್.

ಸರ್ವಂಸಹಾಯೈನಮಃ.

# ಸೇವಾವಿಚಾರ

---

"ಚಿತ್ತೇ ಕರೋಮಿ ಸ್ಫುರಿತಾಕ್ಷಮಾಲಂ
ಸವ್ಯೇತರಂ ನಾಥ ಕರಂ ತ್ವದೀಯಮ್ ।
ಜ್ಞಾನಾಮೃತೋದಞ್ಚನಲಾಲಸಾನಾಂ
ಲೀಲಾಘಟೀಯಂತ್ರ ಮಿವಾಶ್ರಿತಾನಾಮ್ ॥"

ನನ್ನ ಪರಮ ಪೂಜ್ಯಭಗಿನಿಯರೇ !

ತಿಳಿದವರೂ, ದೊಡ್ಡವರೂ ಆಗಿರುವ ನಿಮ್ಮ ಮುಂದೆ, ತಿಳಿವಿಲ್ಲದ ನಾನು, ಏನನ್ನು ಹೇಳಬಲ್ಲೆನು ? ತಾವುಗಳೇನೊ, ನನ್ನನ್ನು ಇಷ್ಟೊಂದು ವಿಶ್ವಾಸದಿಂದ ಗೌರವಿಸುತ್ತಿರುವಾಗ ನಾನು ಅದನ್ನು ಯಾವರೀತಿಯಿಂದ ಸಾರ್ಥಕ್ಯ ಪಡಿಸಿಕೊಳ್ಳಲಿ ? ತಾವು ನನ್ನ ಜನ್ಮಸಾಫಲ್ಯಕ್ಕೆಂದು ಕರುಣಿಸಿ, ನಿರೂಪಿಸಿರುವ 'ಸೇವಾಸ್ವರೂಪ' ಸಂಬಂಧವಾದ ಈ ಬಲವತ್ಕಾರ್ಯವನ್ನು ನಿರ್ವಹಿಸುವ ಶಕ್ತಿಯು ನನಗಿಲ್ಲವಾದರೂ, ಇಲ್ಲವೆಂದು ಸೊಲ್ಲೆತ್ತದಿರುವುದು ಹೇಗೆ ? ಹೇಗೂ, ಗುರು ಜನರ ಮತ್ತು ಹಿತೈಷಿಣಿಯರಾದ ತಮ್ಮಗಳ ಆಜ್ಞೆಯನ್ನು ಮೀರಲಾರದೆ, 'ತಿಳಿಯದುದನ್ನು ತಿಳಿದವರಲ್ಲಿ ಕೇಳಿ ತಿಳಿಯಬೇಕೆಂಬ' ನೀತಿಯನ್ನೇ ಅನುಸರಿಸಿ, ನನ್ನ ಅಲ್ಪಪ್ರಜ್ಞೆಗೆ ತಕ್ಕಷ್ಟನ್ನೇ ಇಲ್ಲಿ ಹೇಳುತ್ತಿರುವೆನು. ಅದರಲ್ಲಿ ತೋರಿಬರಬಹುದಾದ

Digitized by ROJA MUTHIAH RESEARCH LIBRARY

ದೋಷ, ಲೋಪಗಳನ್ನು ಕ್ರಮಪಡಿಸಿ, ಮನ್ನಿಸುವದು, ಹಿರಿಯರೂ, ಅರಿತವರೂ ಆದ ನಿಮ್ಮನ್ನೇ ಸೇರಿರುವುದು.

ನನ್ನ ಪ್ರಿಯಭಗಿನಿಯರೇ !

ನಾನು ಪ್ರವೇಶಮಾಡಿರತಕ್ಕ ಸ್ಥಾನವೆಂದರೆ-ಪರಮಪವಿತ್ರತಮವಾದ ಸೇವಾಮಂದಿರವು. ಇಲ್ಲಿರುವ ತಾವೆಲ್ಲರೂ ಸೇವಾಕಾರ್ಯದಲ್ಲಿ ಅಧಿಕ ಶ್ರದ್ಧಾಗೌರವವನ್ನು ವಹಿಸಿ, ದೇಶಕ್ಕೂ, ಸಮಾಜಕ್ಕೂ, ಮುಖ್ಯವಾಗಿ ಮಾನವನ ಆತ್ಮಕ್ಕೂ ಕಲ್ಯಾಣವನ್ನುಂಟುಮಾಡುವ ಮಹತ್ಕಾರ್ಯಕಲಾಪಗಳಲ್ಲಿ ನಿರತವೃತಿಗಳಾದ ಮಹಿಳಾಮಣಿಯರಾಗಿರುವಿರಿ. ಇಂತಿರುವ ತಮ್ಮಿಂದ ನಿತ್ಯಸೇವೆಯನ್ನು ಕೈಕೊಳ್ಳುತ್ತಿರುವ ಸ್ವಾಮಿಯೇ, ಜ್ಞಾನಮಯರೂಪದಿಂದ ಈ ಪವಿತ್ರಸ್ಥಾನದಲ್ಲಿ ಮೂರ್ತೀಭವಿಸಿ, ಪ್ರಕಾಶಿಸುತ್ತಿರುವನು. ಇಂತಹ ಪರಮಪವಿತ್ರಸ್ಥಾನದಲ್ಲಿ ನಾವು ಮಾಡಬೇಕಾಗಿರುವ ಕೆಲಸವೇನೆಂದರೆ:—ಕೇವಲ ಸೇವೆಯೊಂದಲ್ಲದೆ, ಮತ್ತೊಂದಿಲ್ಲವೆಂಬುದೇ ನನ್ನ ತಿಳಿವಳಿಕೆಯಾಗಿದೆ.

ಆ 'ಸೇವೆ' ಯೆಂಬುದರ ಆಶಯವು, ಆತ್ಮಸಮಾಧಾನವನ್ನು ಹೆಚ್ಚಿಸುವ ಕ್ರಿಯಾಕಲಾಪವೆಂದು ಸಮರ್ಥಿಸುವುದಾಗಿದೆ. ಈ ಸೇವೆಯಲ್ಲಿ- 'ಭಾವನಾಸೇವೆ, ಕ್ರಿಯಾಸೇವೆ, ಸಾರ್ಥಕ್ಯಸೇವೆ' ಎಂದು ಮೂರುಬಗೆಯಾಗಿರುತ್ತದೆ.

೧ನೇ ಭಾವನಾಸೇವೆ—ಎಂದರೆ ಮನಸ್ಸಿನಲ್ಲಿ ಯಾವುದೇ ಒಂದುಬಗೆಯ ವಿಕಾರವನ್ನೂ ಹೊಂದದೆ, ಸಮಸ್ತಪ್ರಾಣಿವರ್ಗಕ್ಕೂ ಹಿತವನ್ನು ಕೋರುತ್ತ, ಎಂದರೆ,—ಈ ಪ್ರಪಂಚವೆಲ್ಲವೂ, ಆ ವಿಶ್ವಪಿತನ ವಾತ್ಸಲ್ಯ ವಿಶೇಷದಿಂದ ಬಂಧಿಸಲ್ಪಟ್ಟಿರುವುದರಿಂದ ಆವುದೊಂದು



ಪ್ರಾಣಿಗೆ ಅಹಿತವನ್ನು ಕೋರುವುದರಿಂದಲೇ ಆಗಲಿ, ಆ ಪರಮಾತ್ಮನ ಅಂತಃಕರಣವು ಮರುಗುವಂತಾಗುವುದೆಂದೂ, ಹಾಗೆ ಆ ಪರಮಾತ್ಮನ ಅಂತಃಕರಣವನ್ನು ನೋಯಿಸುವ ಅಧಮಕಾರ್ಯವು ಆತನ ಅನಂತಸಂತಾನದಲ್ಲಿ ಒಬ್ಬನಾಗಿರುವ ತನಗೆ ಸರ್ವಥಾ ಕೂಡದೆಂದೂ, ಆತನ ಸುಪ್ರಸನ್ನತೆಯನ್ನು ಹೊಂದಬೇಕೆಂದಿರುವ ತನಗೆ, ಆತನ ಅನಂತ ಸಂತಾನವನ್ನೂ, ವಿಶ್ವಾಸಗೌರವದಿಂದ ಬಂಧಿಸುವುದೇ ಮುಖ್ಯೋಪಾಯವೆಂದೂ ಭಾವಿಸಿ, ಸರ್ವಪ್ರಾಣಿಗಳಲ್ಲಿಯೂ ಸಮತಾಭಾವನೆಯನ್ನಿಟ್ಟು, ನಡೆಯುವುದೇ 'ಭಾವನಾಸೇವೆ' ಯೆನ್ನಿಸುವುದು. ಇಂತಹ 'ಭಾವನಾಸೇವೆಗೆ' ಸಾಧನಬಲವು ದೃಢವಾಗಿರಬೇಕು.

೨ನೇ ಕ್ರಿಯಾಸೇವೆ— ಕ್ರಿಯಾಸೇವೆಯೆಂಬುದು ಕೂಡ ಭಾವನಾಸೇವೆಯನ್ನೇ ಅನುಸರಿಸಿರುವುದು. ಹೇಗೆಂದರೆ—ಮನಸ್ಸಿನಲ್ಲಿ ಸಮಸ್ತ ಪ್ರಾಣಿಗಳಿಗೂ ಹಿತವನ್ನು ಕೋರುತ್ತಿದ್ದು, ಪರಮಾತ್ಮ ಕೃಪಾ ಲಬ್ಧವಾದ ಬುದ್ಧಿ, ಶಕ್ತಿ, ಪ್ರಜ್ಞಾಸಂಪತ್ತಿಗಳಿಂದ ಕರಣಕಳೇಬರಗಳ ಸಾರ್ಥಕ್ಯತೆಗೆ ಅವಶ್ಯಕಗಳಾದ ಕೆಲಸಗಳನ್ನು ಮಾಡಬೇಕೆಂಬ ಕರ್ತವ್ಯಸ್ಫೂರ್ತಿಯನ್ನು ಹೊಂದಿ, ದೇಹಶ್ರಮವನ್ನು ಸಹಿಸಿ, ತನ್ನ ನಿತ್ಯ, ನೈಮಿತ್ತಿಕ ಕೈಂಕರ್ಯದಲ್ಲಿ ಶ್ರದ್ಧೆಯಿಂದ ನಡೆಯುತ್ತಾ ಬರುವುದೇ 'ಕ್ರಿಯಾಸೇವೆ' ಯೆನ್ನಿಸುವುದು. ಇದಕ್ಕೆಂದರೆ ನ್ಯಾಯಾರ್ಜಿತವಾದ ದ್ರವ್ಯವೂ, ಕಷ್ಟಾರ್ಜಿತವಾದ ಮನಸ್ಸ್ಥೈರ್ಯವೂ, ತನ್ಮೂಲಕ ಲಬ್ಧವಾದ ಆತ್ಮಾನಂದವೂ ಮೂಲಾಧಾರಪಾತ್ರಗಳಾಗಿರುವುವು.

ಇನ್ನು 'ಸಾರ್ಥಕ್ಯಸೇವೆ'—ಯೆಂಬುದಾದರೂ, ಮೇಲಿನ ಎರಡು ಬಗೆಯ ಸೇವೆಯೂ ಸೇರಿದ್ದು, ಮನಸ್ಸು, ವಾಕ್ಕು, ಕ್ರಿಯೆಗ

Digitized by ROJA MUTHIAH RESEARCH LIBRARY

ಳೆಂಬ ಕರಣತ್ರಯದಲ್ಲಿಯೂ ಒಂದೇ ಮತವನ್ನು ಹಿಡಿದು, ನಿತ್ಯಸೇವೆಯಲ್ಲಿ ಜಾಗರೂಕರಾಗಿ ವರ್ತಿಸುವುದಾಗಿದೆ.

ಇಂತಹ 'ಸಾರ್ಥಿಕ್ಯಸೇವೆ'ಯನ್ನು ಮಾಡಬೇಕೆಂಬುದು ಮಹಾತ್ಮರಪಾಲಿಗೆ ಮಾತ್ರವೇ ಸೇರಿದೆ. ಎಂದರೆ—ಸಾಮಾನ್ಯರು ಇದನ್ನು ಮಾಡಬಾರದೆಂದಲ್ಲ. ಪ್ರತಿ ಮಾನವನೂ ಅತ್ಯಾವಶ್ಯಕವಾಗಿ ಮಾಡಬೇಕಾದ ಸೇವೆಯೇ ಇದಾಗಿರುವುದು. ಆದರೆ ಉಪಪತ್ತಿಯಿಲ್ಲದವರೂ, ಹೀನಬಲರೂ, ಇಂತಹ ಸೇವೆಯನ್ನು ಮಾಡುವುದು ಹೇಗೆಂಬ ಆಕ್ಷೇಪವುಂಟಾಗಬಹುದು. ಉದ್ಯೋಗವನ್ನಾರಂಭಿಸದವರಿಗೆ ಉಪಪತ್ತಿಯಾಗಲೀ, ಅಭ್ಯಾಸಮಾಡದವರಿಗೆ ಶಕ್ತಿ ಸಂಪತ್ತಿಯಾಗಲೀ, ಲಭಿಸುವುದೆಂಬುದು ಅಸಂಭವ. ಇತಿ ಕರ್ತವ್ಯವನ್ನು ವಿಚಾರಕ್ಕೆ ತಂದು, ಅದನ್ನು ಸರ್ವಪ್ರಕಾರದಿಂದಲೂ ಸಾಫಲ್ಯಗೊಳಿಸಬೇಕೆಂಬ ಆಸಕ್ತಿಯಿಂದ ನಡೆಯುವಾತನಿಗೆ ಸಕಲವಿಧವಾದ ಸಹಾಯಸಂಪತ್ತಿಯೂ, ಲಭಿಸಿಯೇ ಲಭಿಸುವುದು. 'ಜನಮೆಚ್ಚಿಗೆಗಾಗಿ ಬಾಯಮಾತಿಂದ ಲೋಕಹಿತಕಾರ್ಯದಲ್ಲಿ ತೊಡಗಿರುವ ತನಗೆ ಸಹಾಯವಾಗಲೀ, ಇತರ ಅನುಕೂಲ್ಯಗಳಾಗಲೀ, ಲಭಿಸಿಲ್ಲವೆಂದು ದೂರುವುದರಿಂದ ನಾವು ಸೇವೆಯನ್ನು ಮಾಡಿದವರೆಂದಾಗಲೀ, ಸೇವಕರ ಗುಂಪಿಗೆ ಸೇರಿದವರೆಂದಾಗಲೀ ಗಣಿಸಲ್ಪಡಲಾರೆವು.

ಮೇಲೆ ಹೇಳಿರುವ ಸೇವೆಯಿಂದ ನಾವು ಕೃತಾರ್ಥರಾಗಬೇಕಾದರೆ, "ನಾವು ಜನ್ಮವೆತ್ತಿರುವುದೇ ಸೇವೆಗಾಗಿ, ನಮ್ಮ ನಿತ್ಯ ನೈಮಿತ್ತಿಕ ವೃತ್ತಿರೂಪವಾದ ಈ ಸೇವೆಯೇ ನಮ್ಮ ಮುಂದಿನ ಆತ್ಮಾನಂದಲಾಭಕ್ಕೆ ಉಪಾಯವು," ಎಂಬ ಭರವಸೆಯನ್ನು ಹೊಂದಿ, ಅದನ್ನು ಕಾಲ, ದೇಶ ವರ್ತಮಾನಸ್ಥಿತಿಗಳನ್ನನುಸರಿಸಿ ತಕ್ಕ ರೀತಿಯಿಂದ ಎಂದರೆ—"ಈ ಕಾಲಕ್ಕೆ ಈ ಕಾರ್ಯವು ಅಗತ್ಯವು. ಈ ದೇಶಪರಿಸ್ಥಿತಿಗೆ ಇದನ್ನು ಈ ದಾರಿಯಲ್ಲಿ ತರುವುದು ಶ್ರೇಯಸ್ಕರವು. ಈಗಿನ ಸಂದರ್ಭದಲ್ಲಿ ಈ ವಿಚಾರವು ಅಭಿವೃದ್ಧಿಹೇತುವು.'' ಎಂಬಿವನ್ನು ಬಲ್ಲವರ ಮುಖದಿಂದ ತಿಳಿದು, ವಿಚಾರಪೂರ್ವಕವಾಗಿ ಅದನ್ನು ಅನುಷ್ಠಾನಕ್ಕೆ ತರುವುದು ಅತ್ಯವಶ್ಯಕವಾಗಿದೆ.



ಇನ್ನು ಈ ಸೇವೆಯಲ್ಲಿ ಎಷ್ಟು ಅಂತರಗಳಿವೆ ಯೆಂಬುದನ್ನು ವಿಚಾರಮಾಡಬೇಕಲ್ಲವೆ ? ಸಾಮಾನ್ಯವಿಚಾರದಿಂದ ನೋಡಿದರೆ ಈ ಸೇವೆಯಲ್ಲಿ 'ವಿಶ್ವಸೇವೆ' 'ದೇಶಸೇವೆ' 'ಮಾತೃಸೇವೆ' 'ಪತಿಸೇವೆ' ಎಂಬದಾಗಿ ೪ ಅಂತರಗಳಿವೆ. ಈ ನಾಲ್ಕು ಅಂತರಗಳಲ್ಲಿಯೇ ಉಳಿದ ಎಲ್ಲಾ ಭಾಗಗಳೂ ಅಡಕವಾಗಿರುವುವು. ಹೇಗೆಂದರೆ—

೧ನೇ **ವಿಶ್ವಸೇವೆ**—ಇದೇ ಸೇವೆಯ ಅಗ್ರಸ್ಥಾನವೆನ್ನಬೇಕು ಈ 'ವಿಶ್ವಸೇವೆ' ಎಂದರೆ—ಈ ಪ್ರಪಂಚವನ್ನೇ ಸೇವಿಸುವುದೆಂಬ ಅಭಿಪ್ರಾಯವು. ಪ್ರಪಂಚವನ್ನು ಸೇವಿಸುವುದೆಂದರೆ, ಈ ವಿಶ್ವಕ್ಕೊಳಪಟ್ಟ ಸಮಸ್ತಪ್ರಾಣಿವರ್ಗವನ್ನೂ ಪರಮಾತ್ಮಸ್ವರೂಪದಿಂದ ಭಾವಿಸಿ, ಸಂತೋಷಪಡುವುದೇ'ವಿಶ್ವಸೇವೆ'ಯೆನ್ನಿಸುವುದು. ಈ ಸೇವೆಯು ಸಾಮಾನ್ಯರಿಗೆ ಸಾಧ್ಯವಲ್ಲ. ಸಕಲವಿಧವಾದ ಸೇವೆಗೂ ಅತ್ಯುತ್ತಮಸ್ಥಾನವನ್ನು ಹೊಂದಿರುವ ಈ 'ವಿಶ್ವಸೇವೆ'ಯು, ಆತ್ಮಸ್ವರೂಪವನ್ನು ತಿಳಿದ ದಿವ್ಯಜ್ಞಾನಿಗಳಿಗೆ ಮಾತ್ರ ಲಭಿಸತಕ್ಕುದಲ್ಲದೆ ಜನಸಾಮಾನ್ಯಕ್ಕೆ ಸುಲಭಸಾಧ್ಯವಾಗಿಲ್ಲ.

R N16
Digitized by ROJA MUTHIAH RESEARCH LIBRARY

ಏಕೆಂದರೆ—ಇಂತಹ 'ವಿಶ್ವಸೇವೆ'ಯಲ್ಲಿ, 'ಈತನು ಉತ್ತಮನು, ಇವನು ಅಧಮನು, ಇವನು ಶ್ರೀಮಂತನು, ಇವನು ದೀನನು, ಇವನು ಬಲಾಢ್ಯನು, ಅವನು ನಿರ್ಬಲನು, ಈತನು ಪಂಡಿತನು, ಆತನು ಪಾಮರನು, ಅವನು ಪತಿತನು, ಇವನು ಪರಿಶುದ್ಧನು' ಎಂಬೀ ಬಗೆಯ ಭೇದಭಾವನೆಗೆ ಅವಕಾಶವಿರಬಾರದು. ಭೇದಭಾವನೆಯಾಯ್ತೆಂದರೆ ಇತರ ಲೋಭ, ಮೋಹಗಳ ಸಂಕಲೆಗಳು ಆತ್ಮನನ್ನು ತೊಡಕಿಸಿ ಮಮಕಾರವ್ಯಾಧಿಯಿಂದ ಭ್ರಾಂತನನ್ನಾಗಿ ಮಾಡಿಬಿಡುವುದು. ಹೀಗಾಗುವುದರಿಂದ ಆತ್ಮನಿಗೆ ಅಂತಸ್ತಾಪಗಳು ಹೆಚ್ಚಿ, ಉನ್ನತಿಗೆ ಹೇತುವೂ, ಆನಂದಕ್ಕೆ ಆಧಾರವೂ ಆದ ಸ್ವಸ್ವರೂಪ, ಸ್ವಕರ್ತವ್ಯ, ಪರಮಾತ್ಮಸಂಬಂಧಗಳನ್ನು ಮರೆತು, ದುಃಖಭಾಜನನಾಗಿ ನರಳಬೇಕಾಗುವುದು. ಅಂತಹನಿಂದ ವಿಶ್ವಸೇವೆಯು ಹೇಗೆ ಸಾಧಿಸಲ್ಪಡುವುದು ? ಆದುದರಿಂದ ವಿಶ್ವಸೇವಕರಾದ ದಿವ್ಯಜ್ಞಾನಿಗಳು ಸರ್ವಸಮತಾಭಾವನೆಯಿಂದ ಈ ಎಲ್ಲರನ್ನೂ ಆ ವಿರಾಡ್ರೂಪನ ಅಂಶರೂಪವೆಂಬ ಭಾವನೆಯಿಂದಲಾಗಲೀ ಇಲ್ಲವೇ, ಆತನ ಕೃಪಾರೂಪವೆಂದಾಗಲೀ ಭಾವಿಸಿ, ಅಂತಹರ ವಿಷಯದಲ್ಲಿ ತಾವು ದಾಸಭೂತರೆಂದು ಬಗೆದು, ವರ್ತಿಸುವುದೇ 'ವಿಶ್ವಸೇವೆ'ಯೆನ್ನುವರು. ಇದು ಯೋಗ, ಜ್ಞಾನಗಳ ಅಭ್ಯಾಸ ಬಲದಿಂದ ಲಭಿಸತಕ್ಕ ಸೇವೆಯು.

**೨ನೇ ದೇಶಸೇವೆ**—ಇದು 'ವಿಶ್ವಸೇವೆ'ಯನ್ನೇ ಅನುಸರಿಸುತ್ತಿರುವುದು. 'ದೇಶಸೇವೆ' ಎಂದರೆ—ನಮ್ಮ ದೇಶವನ್ನು ಸೇವಿಸುವುದೆಂಬ ಅಭಿಪ್ರಾಯ. ಎಂದರೆ, "ನಮ್ಮ ಈ ದೇಶದ ಪ್ರಾಶಸ್ತ್ಯವು ಯಾವುದನ್ನು ಅವಲಂಬಿಸಿರುವುದು, ಯಾವುದರಿಂದ ನಮ್ಮ ದೇಶದಲ್ಲಿ ಸುಭಿ



ಕ್ಷ, ಸುಖ, ಸಂಪದಭಿವೃದ್ಧಿಗಳು ಬೆಳಗುತ್ತಿರುವುವು, ಏತರಿಂದ ನಮ್ಮ ದೇಶವು ಸ್ತುತ್ಯರ್ಹವಾಗಿರಬೇಕು ? ನಾವು ನಮ್ಮ ದೇಶಕ್ಕೆ ಮಾಡಬೇಕಾಗಿರುವ ಕಾರ್ಯಗಳಾವುವು?" ಎಂಬಿವುಗಳನ್ನು ವಿಚಾರಕ್ಕೆ ತೆಗೆದುಕೊಂಡು ಅದನ್ನು ಕಾರ್ಯಕಲಾಪಗಳಿಂದ ಅನುಷ್ಠಾನಕ್ಕೆ ತರುವುದೇ 'ದೇಶಸೇವೆ'ಯೆನ್ನಿಸುವುದು. ಈ ಬಗೆಯ ಸೇವೆಯು ಪ್ರತಿಯೊಬ್ಬರಿಗೂ ಕರ್ತವ್ಯಕರ್ಮದಲ್ಲಿ ಸೇರಿರುವುದರಿಂದ ಪ್ರತಿಯೊಬ್ಬ ದೇಶಸೇವಕನೂ, "ನನ್ನ ಈ ದೇಹಧಾರಣದ ಉದ್ದೇಶವೇನು ? ನನ್ನಿಂದ ನಮ್ಮ ಸಮಾಜಕ್ಕೆ ಯಾವ ಕಲ್ಯಾಣವುಂಟಾಯಿತು ? ನಾನು ನನ್ನ ದೇಶಕ್ಕೂ, ದೇಶೀಯರಿಗೂ, ಯಾವ ಬಗೆಯ ಉಪಯೋಗವನ್ನು ಕಲ್ಪಿಸಿರುವೆನು ? ನನ್ನ ಕರ್ತವ್ಯ ಕರ್ಮದಲ್ಲಿ ಇದು ಸೇರಿದುದಲ್ಲವೆ ? ನಾನಿದನ್ನು ತೃಪ್ತಿಕರವಾಗಿ ನಿರ್ವಹಿಸಬೇಕಲ್ಲವೆ?" ಎಂದು ತನ್ನಲ್ಲಿ ತಾನೇ ಚಿಂತಿಸಿ, ತನಗೆ ತಿಳಿಯದ ಅಂಶಗಳನ್ನು ತಿಳಿದವರಾದ ಗುರುಜನರಿಂದ ಕೇಳಿ ತಿಳಿದು, ನಡೆಯಬೇಕೆಂಬುದನ್ನು ಬಲವಾಗಿ ನಂಬಿರಬೇಕು. ಈ ದೇಶಸೇವೆಯಲ್ಲಿ 'ಸಂತಸೇವೆ' 'ಸಮಾಜಸೇವೆಗಳೆಂಬ' ಎರಡುಭಾಗಗಳುಂಟು. ಇವೆರಡರಲ್ಲಿ ಒಂದೊಂದೂ, ಮಹತ್ವದ ವಿಷಯವಾಗಿದ್ದು, ಆತ್ಮೋನ್ನತಿಗೆ ಮುಖ್ಯಸಾಧನವೆನ್ನಿಸಿರುವುದು.

**೩ನೇ ಮಾತೃಸೇವೆ**—ಇದೇ 'ದೇಶಸೇವೆಗೆ' ಮಾರ್ಗವನ್ನು ತೋರುವ ಅಂತರವು. 'ಮಾತೃಸೇವೆ' ಎಂದರೆ—ತಾಯಿಯನ್ನು ಸೇವಿಸುವುದೆಂಬ ಅಭಿಪ್ರಾಯ. ಈ ಮಾತೃಸೇವೆಯು ಮಾನವನ ಇಹಪರಗಳೆರಡಕ್ಕೂ ನಿತ್ಯಾನಂದವನ್ನು ದೊರಕಿಸಿ ಕೊಡತಕ್ಕ ಮುಖ್ಯ ಸೇವೆಯೆನ್ನಿಸುವುದು. ಹೇಗೆಂದರೆ—"ಮಾತೃದೈವವೇ ಸಮಸ್ತ ದೈವಕ್ಕೂ

Digitized by ROJA MUTHIAH RESEARCH LIBRARY

ಅಧಿಕವಾದುದು. ಮಾತೃಸೇವೆಯೇ ಅತ್ಯುತ್ತಮಸೇವೆಯು, ಪಿತೃಋಣವು ಪರಿಹಾರವಾದರೂ, ಮಾತೃಋಣವನ್ನು ತೀರಿಸುವುದು ಪ್ರಯಾಸವು." ಎಂದು ಪ್ರಾಜ್ಞರು ಹೇಳುತ್ತಿರುವರು. ಎಂದರೆ—ಪ್ರಯಾಸಕರವಾದ ಕೆಲಸದಲ್ಲಿ ತೊಡಗಲೇ ಬಾರದೆಂದು ಕೆಲವರು ಆಕ್ಷೇಪಿಸಬಹುದು. ಅದು ಸಾಧುವಲ್ಲ. ಮತ್ತಾವ ಸೇವೆಯನ್ನು ಮಾಡಿದರೂ ಮಾತೃಸೇವೆಯನ್ನು ಮಾಡದೆ ಋಣವಿಮುಕ್ತನಾಗುವೆನೆಂಬುದು ಸಂಗತವಲ್ಲ. ಸಾಧ್ಯವಾದಮಟ್ಟಿಗೂ, ಮಾತೃಸೇವೆಯನ್ನು ಮಾಡಬೇಕಾದುದು ಕರ್ತವ್ಯವು.

'ಮಾತೃಸೇವೆ' ಎಂದರೆ—ಬರಿಯಮೇಲಿನ ಉಪಚಾರಮಾತ್ರವಲ್ಲ. ತಾಯಿಯರ ಕೈಕಾಲುಗಳನ್ನೊತ್ತಿ, ಗಾಳಿಯನ್ನೂ ಹಾಕಿ, ಅನ್ನಪಾನಗಳನ್ನು ತಂದಿತ್ತಮಾತ್ರಕ್ಕೆ ಸೇವೆಯು ಮುಗಿದಂತಾಗಲಿಲ್ಲ. ತನ್ನ ಶೀಲ, ಸತ್ಯ, ಧರ್ಮ, ದಯಾಪರತೆಗಳಿಂದ ತನಗೂ ತನ್ನ ಆಶ್ರಿತಾನಾಥರಿಗೂ, ಮತ್ತು ತನ್ನ ಸಮಾಜಕ್ಕೂ ಹಿತವಾಗುವಂತಿದ್ದು, ಅದರಿಂದ ಲಬ್ಧವಾಗುವ ಸತ್ಕೀರ್ತಿಸಂಪದಗಳನ್ನು ನೋಡಿ, ತಾಯಿಯ ಮನಸ್ಸು ಆಹ್ಲಾದಗೊಳ್ಳುವಂತೆ ಆಚರಿಸುವುದೇ ಸೇವೆಯೆನ್ನಿಸುವುದು.

ಈ ಮಾತೃ ಶಬ್ದವು ಜನ್ಮದಾತೆಗೂ, ಜನ್ಮಭೂಮಿಗೂ, ಅನ್ವಯಿಸುವುದು. ಈ ಜನ್ಮಭೂಮಾತೆಯರಿಗೆ ಪರಸ್ಪರ ಪ್ರಭುಪ್ರತಿನಿಧಿ ಸಂಬಂಧವನ್ನು ಕಲ್ಪಿಸಿ, ಈ ಜನನಿಜನ್ಮಭೂಮಿಗಳನ್ನು ಮಿಂಚಿದ ದೈವವಿನ್ನಿಲ್ಲವೆಂದೂ, ತನ್ನ ಸಮಸ್ತಸುಖ ಸೌಭಾಗ್ಯಸಂಪತ್ತಿಗೂ ಇದೇ ಆಧಾರಪಾತ್ರವೆಂದೂ ಅನನ್ಯಭಾವನೆಯಿಂದ ನಂಬಿ, ಈ ಮಾತೃಹೃದಯವು ಆಹ್ಲಾದಗೊಳ್ಳುವಂತೆ, ಎಂದರೆ ಹೆತ್ತತಾಯಿಯು ನಮ್ಮ ಸದ್ವೃತ್ತದಿಂದ



ಸಂತುಷ್ಟಳಾಗುವಂತೆಯೂ, ತನ್ನ ದೃಢಪ್ರಯತ್ನ ಬಲದಿಂದ ದೇಶದ ಅಭಿವೃದ್ಧಿಯು ಸಾಧಿಸಲ್ಪಟ್ಟಿತೆಂಬ ಪ್ರಾಶಸ್ತ್ಯದಿಂದ ತನ್ನ ಜನ್ಮಭೂಮಿಯು ಪ್ರಕಾಶಕ್ಕೆ ಬರುವಂತೆಯೂ ಮಾಡುವುದೇ ಮಾತೃಸೇವೆಯೆನ್ನಿಸುವುದು. ಈ ಸೇವೆಯನ್ನು ಮಾಡಲು ಯಾವ ಪುತ್ರನು ಅಸಮರ್ಥನಾಗುವನೋ, ಅವನಿಗೂ ಹೆಚ್ಚಾದ ಕೃತಘ್ನನು ಈ ಪೃಥ್ವಿಯಲ್ಲಿರುವುದಿಲ್ಲ. ಮಾತೃಸೇವೆಯನ್ನು ಮಾಡುವ ಪುತ್ರನೇ ಪುತ್ರನು. ಇದನ್ನು ಮೂಲಮಂತ್ರದಂತೆ ಜಪಿಸಿ, ಇದರಿಂದ ಸಿದ್ಧಿರಸವನ್ನು ಹೊಂದಿದುದರಿಂದಲೇ ನಮ್ಮ ಪೂರ್ವಜರಲ್ಲಿ ಸತ್ಯವಾನನೇ ಮೊದಲಾದ ಮಹನೀಯರು ಆಚಂದ್ರಾರ್ಕವಾದ ಕೀರ್ತಿಗೆ ಪಾತ್ರರಾಗಿರುವರು.

ಈ ಮಾತೃಸೇವೆಗೆ ಸೇರಿದಂತೆಯೇ ಗುರುಸೇವೆಯೇ ಮೊದಲಾದ ಹಲವು ಭಾಗಗಳಿರುವವು. ಅವುಗಳೆಲ್ಲವನ್ನೂ ಇಲ್ಲಿ ವಿವರಿಸಬೇಕೆಂದರೆ ಸಾಧ್ಯವಿಲ್ಲ. ಮುಖ್ಯವಾಗಿ ಮಾತೃದೈವದ ಸಂಪೂರ್ಣಕೃಪೆಯು ನಮ್ಮಲ್ಲಿ ಸಾಕ್ಷಾತ್ಕರಿಸಿರಬೇಕಾದರೆ, ನಾವು ಗುರುಜನರನ್ನೂ, ಬಂಧುಜನರನ್ನೂ, ಆಶ್ರಿತರನ್ನೂ ಯಥೋಚಿತವಾಗಿ ಸೇವಿಸಲೇ ಬೇಕೆಂದರೆ ಸಾಕಾಗಿರುವುದು.

ಇಲ್ಲಿಯವರೆಗೆ ಹೇಳಿದ ಸೇವಾವಿಚಾರವು ಸ್ತ್ರೀಪುರುಷರೆಲ್ಲರಿಗೂ ಸೇರಿದುದಾಗಿರುವುದು. ಇನ್ನು ಸ್ತ್ರೀಯರಿಗೆ ಇವಲ್ಲದೇ ಇನ್ನೂ ಮುಖ್ಯವಾದ ಸೇವೆಯೊಂದಿರುವುದು. ಅದಾವುದೆಂದರೆ— ಅದೇ ೪ ನೇ 'ಪತಿಸೇವೆ' ಇದೇ ಸ್ತ್ರೀಯರಿಗೆ ಆದಿಯಿಂದಲೂ ಆಲಂಬಪ್ರಾಯವಾಗಿ ಬಂದಿರುವ ಸೇವೆಯು. ಈ ಪತಿಸೇವೆಯಲ್ಲಿ ಮೇಲೆಹೇಳಿರುವ ಭಾವಶುದ್ಧಿ ಕ್ರಿಯಾಶುದ್ಧಿಗಳೆರಡೂ ದೃಢಭಾವದಲ್ಲಿರಬೇಕಲ್ಲದೆ, ಇತರಸೇವೆಗಳಂ



Digitized by ROJA MUTHIAH RESEARCH LIBRARY

ತೆಯೇ ಇದೊಂದಾಗಿದೆಯೆಂದು ಭಾವಿಸದೆ, ಪರಮಾತ್ಮನ ಸಾಕಾರಸ್ವರೂಪವೇ ಇದೆಂದು ತಿಳಿದು, ಈ ಮೂರ್ತಿಯನ್ನು ಸರ್ವಪ್ರಕಾರದಿಂದಲೂ ಸೇವಿಸಿ, ಆ ಪರಮಾತ್ಮನ ಪೂರ್ಣಾನುಗ್ರಹಕ್ಕೆ ಪಾತ್ರಳಾಗಬೇಕೆಂಬ ಆಸಕ್ತಿಯು ಅಂಗನಾನಿವಹಕ್ಕೆಲ್ಲಾ ಬಲವಾಗಿರಬೇಕು. ಸರ್ವಪ್ರಕಾರದಿಂದಲೂ, ಎಂದರೆ—ಆತನ ಸುಖದುಃಖಗಳಲ್ಲಿಯೂ, ಪ್ರಮಾದಪ್ರಮೋದಗಳಲ್ಲಿಯೂ, ನಿಂದಾಸ್ತುತಿಗಳಲ್ಲಿಯೂ ತಾನು ಸಹಭಾಗಿನಿಯಾಗಿದ್ದು, ಅಂತಶ್ಶಕ್ತಿ ಸ್ವರೂಪಿಣಿಯಾದ ತನ್ನ ಸಹಾನುಭೂತಿಯಿಂದ ಆತನ ಪ್ರಕೃತಿಯು ಕೆಡದಂತೆ ಎಚ್ಚರಿಕೆಯಿಂದಲೂ, ಪ್ರೇಮಗೌರವಗಳಿಂದಲೂ ರಕ್ಷಿಸಿಕೊಂಡು ಬರಬೇಕು. ಈ ವಿಧವಾದ ಸೇವೆಯಿಂದಲೇ ಆರ್ಯ ಮಹಿಳಾಸಮುದಾಯವು ಧನ್ಯರೆನ್ನಿಸಬೇಕಾಗಿರುವುದು.

ಇಂತಹ ಸೇವೆಯನ್ನು ನಂಬಿ, ಸ್ವಪ್ನ—ಸುಷುಪ್ತಿಗಳಲ್ಲಿಯೂ ಈ ತಮ್ಮ ಸೇವಾಕಾರ್ಯಕ್ಕೆ ಲೋಪವನ್ನು ತರಬಾರದೆಂಬ ಜಾಗ್ರತೆಯಿಂದ ನಮ್ಮ ಆದರ್ಶಮಹಿಳಾಮಣಿಯರಾಗಿರುವ ಸೀತಾ, ಸಾವಿತ್ರಿ, ಚಂದ್ರಮತಿ, ದಮಯಂತಿ, ಸುಕನ್ಯಾದೇವಿಯೇ ಮೊದಲಾದವರು ತಮ್ಮ ದೃಢವ್ರತ ಪರೀಕ್ಷಾರ್ಥವಾಗಿ ಒದಗಿಬಂದ ವನವಾಸ—ವಿಯೋಗಾದಿ ಕ್ಲೇಶಗಳಿಂದ ಧೃತಿಗೆಡದೆ, ತಮ್ಮ ಪತಿಗಳ ಆತ್ಮಾನಂದವೇ ತಮ್ಮ ಸುಖವೆಂದೂ, ಅವರ ಸತ್ಯಪರಾಕ್ರಮದ ದಿಗ್ವಿಜಯವೇ ತಮ್ಮ ವ್ರತಸಿದ್ಧಿಯೆಂದೂ, ಅವರ ಶಾಶ್ವತಕೀರ್ತಿಯೇ ತಮ್ಮ ಸೇವೆಗೆ ಪ್ರತಿಫಲವೆಂದೂ ನಂಬಿ, ಅಗಾಧವಾದ ತಪಃಕ್ಲೇಶಗಳನ್ನೂ ಅಭ್ಯಾಸಬಲದಿಂದಲೇ ನಿರ್ವಹಿಸಿ, ಮುಂದೆ ಬರುವವರಾದರು. ಇನ್ನು ನಮ್ಮವರ ಎಂದರೆ ಸ್ತ್ರೀಯರ ಸೇವೆಯಲ್ಲಿ ಮೇಲೆ ಹೇಳಿದುವುಗಳಲ್ಲದೆ ಬಹು ಗೂಢರೂಪದಿಂದಿರುವ



ಸೇವೆಯೆಂದರೆ, ಅವರ ನೈಸರ್ಗಿಕಸೇವೆಯೊಂದಾಗಿದೆ. ಅದಾವುದು ? ಹೇಗಿರುವುದು ? ಯಾವಕಾಲದಲ್ಲಿ ಹೇಗೆ ಪ್ರದರ್ಶನಕ್ಕೆ ಬರುವುದೆಂಬುದನ್ನು ಇಲ್ಲಿ ವಿವರಿಸುವುದಕ್ಕಸಾಧ್ಯವಾದರೂ, ಒಂದೆರಡು ಅಂಶಗಳನ್ನು ಉದಾಹರಣೆಗೆ ಕೊಟ್ಟು, ಮುಂಬರಿವುದು ನನ್ನ ಕರ್ತವ್ಯವಾಗಿದೆ.

ಸ್ತ್ರೀಯರ ನೈಸರ್ಗಿಕ ಸೇವೆಯೆಂದರೆ, ಸ್ತ್ರೀಸಮುದಾಯವು ತಮ್ಮ ಸ್ವಭಾವ ಸಹಜವಾದ ಕೋಮಲತೆಯಿಂದ ಪ್ರಪಂಚಕ್ಕೆ ಹಿತವನ್ನು ಆಚರಿಸುವುದೆಂದಾಗುತ್ತದೆ. ಈ ವಿಧವಾದ ಸ್ವಾಭಾವಿಕ ಸೇವೆಯು, ಜನಗಳಿಂದ ಹೇಳಿಸಿ, ಕೇಳಿಸಿಕೊಳ್ಳುವಂತಿರದೆ, ತಾನಾಗಿ, ಸಮಯಕ್ಕೆ ಬೇಕಾಗುವಂತಹ ಸಲಕರಣೆಗಳಿಂದ ಪ್ರಾಣಿಹಿತಕಾರ್ಯದಲ್ಲಿ ಬಂದು ಸಿದ್ಧವಾಗಿ ನಿಲ್ಲುವುದು, ಹೇಗೆಂದರೆ—ಈಗ ನಮ್ಮ ಅಂಗನಾಮಣಿಯರು, ತಮ್ಮ ವಿಚಾರಕ್ಕೊಳಪಟ್ಟವರಲ್ಲಿ, ಯಾರಿಗೇಆಗಲಿ, ಅಪಕಂಟಕಗಳುಂಟಾಯಿತೆಂದರೆ, ಅದಕ್ಕಾಗಿ ಮರುಮರುಗಿ, ಅದನ್ನು ನಿವಾರಿಸಲು ತಾವು ಪ್ರಯತ್ನಪಡುವುದೂ, ಸಾಲದುದಕ್ಕೆ ತಮ್ಮ ಅನುಬಂಧಿಗಳನ್ನು ಪ್ರೇರಿಸುವುದೂ, ಮತ್ತೆ ಉತ್ಸಾಹಸಮಯಗಳಲ್ಲಿ ಆನಂದದಿಂದ ಉಬ್ಬಿ ಅಭಿನಂದಿಸುವುದೂ, ಅನನುಕೂಲಕಾಲದಲ್ಲಿ ಬೇಕಾಗುವ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು ಸಂತೋಷಪಡಿಸುವುದೂ, ಉಳಿದ ಸಂದಿಗ್ಧಸಮಯಗಳಲ್ಲಿ ಕಾಲೋಚಿತರೀತಿಯಿಂದ ಧೈರ್ಯೋತ್ಸಾಹಗಳನ್ನುಂಟುಮಾಡುವುದೂ, ಅಲ್ಲಿಗಲ್ಲಿಗೆ ನಮಗೆ ತಿಳಿಯುತ್ತಿರುವುದಷ್ಟೆ. ಹಾಗೆಂದಬಳಿಕ ಅವರೇನು—ಈ ಸೇವೆಯನ್ನು ತಾವು ಮಾಡುವೆವೆಂದೇನಾದರೂ ತಿಳಿದಿದ್ದರೋ ? ಇಲ್ಲ. ಅದು ಅಕಸ್ಮಿಕವಾಗಿ ಉಂಟಾದ

R N16

Digitized by ROJA MUTHIAH RESEARCH LIBRARY

ವಿದ್ಯಮಾನವಾದುದರಿಂದ ಅಂತಹವುಗಳಿಗೆ ಇವರ ಸ್ವಭಾವ ಸಹಜವಾದ ಕೋಮಲತೆಯೇ ಸೇವಿಸುವಂತೆ ಮಾಡಿತೆಂದರೆ ಸಾಕಾಗಿದೆ. ವಸ್ತುಸ್ಥಿತಿಯು ಹೀಗಿರುವುದರಿಂದ ನನ್ನ ಸಹೋದರಿಯರೇ! ಸೇವೆಯಂಬುದು, ಯಾರಿಂದ ಹೆಚ್ಚಾಗಿ ನಡೆಯಬೇಕೆಂದಾಯಿತು? ದೇಶಹಿತಕಾರ್ಯದಲ್ಲಿ ಯಾರು ಹೆಚ್ಚಿನ ಉತ್ತರವಾದಿಗಳಾದರು? ಯಾರಸೇವೆ. ಯಿಂದಲೇ ದೇಶಮಾತೆಯು ಅಭ್ಯುದಿತೆಯಾಗಬೇಕು? ತಿಳಿಯಲಿಲ್ಲವೇ? ಎಲ್ಲಕ್ಕೂ ನಮ್ಮ ಮಹಿಳಾಸಮುದಾಯವೇ ಮೂಲವು. ನಮ್ಮವರ ಸಹಾನುಭೂತಿರೂಪವಾದ ಸಮಯೋಚಿತಸೇವೆಯಿಂದಲೇ ನಮ್ಮ ದೇಶದ ಸಂಪದಭಿವೃದ್ಧಿಯಾಗಬೇಕು. ಹೇಗೆನ್ನುವಿರಿ? ಹಿಂದೆಯೇ ಹೇಳಿರುವೆನಷ್ಟೆ;—ಸೇವೆಯಲ್ಲಿ ಮುಖ್ಯವಾದುದು ಭಾವನಾಸೇವೆಯೆಂದು—ಆ ಭಾವನಾಸೇವೆಯು ನಮ್ಮಿಂದ ಚನ್ನಾಗಿ ನಡೆಯಿಸಲ್ಪಡುತ್ತಿದ್ದು, ಅದರ ಅಂಗಭೂತಗಳಾದ ಸೇವೆಗಳಾಗಿ—ನಮ್ಮ ಹಿತಚಿಂತನೆಗೊಳಪಟ್ಟವರನ್ನು, ಎಂದರೆ-ನಮಗೂ ಕಡಿಮೆಯಾಗಿರುವರನ್ನು ನಮಗೆ ಸಮಾನರನ್ನಾಗಿ ಮಾಡಲು. ನಮ್ಮ ಅಂತಃಕರಣಪೂರ್ವಕವಾದ ಹಿತಸೂಚನೆಯಿಂದ ಎಚ್ಚರಿಸುವುದೂ, ನಮಗೆ ಅಧಿಕರಾದವರನ್ನು ನಮ್ಮ ಅನುವರ್ತನಗುಣದಿಂದ ತೃಪ್ತಿಪಡಿಸುವುದೂ, ಗುರುಜನರಲ್ಲಿ ಸೇವಾಕಾರ್ಯದಲ್ಲಿ ನಮಗಿರುವ ಶ್ರದ್ಧಾಭಕ್ತಿಗೌರವಗಳನ್ನು ನಮ್ಮ ಕ್ರಿಯಾಕಲಾಪಗಳಿಂದ ಪ್ರಕಟಪಡಿಸಿ ಅಂತಹರ ಆಶೀರ್ವಾದ ರೂಪದಿಂದ ಲಬ್ಧವಾಗುವ ಸುಬೋಧಾಮೃತವನ್ನು ಸವಿಸವಿದು, ನಮ್ಮ ಉತ್ಸಾಹಶಕ್ತಿಯಿಂದ ದೇಶಸೇವೆಗೆ ಅರ್ಹತೆಯನ್ನು ಹೊಂದಿನಿಲ್ಲುವುದೂ—ಇನ್ನೂ ಈ ಬಗೆಯ ಸತ್ಕ್ರಿಯಾಕಲಾಪಗಳುತೃಪ್ತಿಕರವಾಗಿ ನಡೆಯಿಸಲ್ಪಡುತ್ತಿರಬೇಕು.



ಪ್ರಕೃತಸ್ಥಿತಿಯಲ್ಲಿ ಈ ನಮ್ಮ ಮಹಿಳಾಸೇವಾ ಸಮಾಜವು, ಮೇಲೆ ಹೇಳಿರುವ ಸೇವೆಗಳನ್ನು ತಕ್ಕಮಟ್ಟಿಗೂ ತೃಪ್ತಿಕರವಾಗಿ ನಡೆಯಿಸುತ್ತಬಂದಿರುವುದಲ್ಲದೆ, ಇನ್ನೂ ಮುಂದುಮುಂದಕ್ಕೆ ಬರುತ್ತಿರುವುದನ್ನೂ, ಈ ಸೇವಾಸಮಾಜದಿಂದ ಈವರೆಗೆ ನಿರ್ವಹಿಸಲ್ಪಟ್ಟಿರುವ ದೇಶಹಿತಕಾರ್ಯಗಳು ಅತ್ಯಂತ ಮಹತ್ವದ ವಿಚಾರಗಳಾಗಿವೆಯೆಂದು ಅನೇಕ ಪತ್ರಿಕೆಗಳು ಶ್ಲಾಘಿಸುತ್ತಿರುವದನ್ನೂ ನೋಡಿ ನನಗಾಗಿರುವ ಆನಂದೋತ್ಸಾಹಗಳು, ಅಷ್ಟಿಷ್ಟೆಂದು ಹೇಳುವಂತಿಲ್ಲ. ಮುಖ್ಯವಾಗಿ ಇಂತಹ ದೇಶಸೇವಾಸಮಾಜಗಳು ಹೆಚ್ಚಾದಷ್ಟೂ, ದೇಶಸೇವೆಯಲ್ಲಿ ನಮ್ಮ ಮಹಿಳೆಯರು, ತಮ್ಮ ಸಹಾನುಭೂತಿಯನ್ನು ಹೆಚ್ಚಿಸಿದಷ್ಟೂ, ನಮ್ಮವರಲ್ಲಿ ಐಕಮತ್ಯದ ಬಲವು ಹೆಚ್ಚಿದಷ್ಟೂ, ನಮ್ಮ ದೇಶದ ಸಂಪದಭಿವೃದ್ಧಿಯೂ, ಅಷ್ಟಷ್ಟು ಹೆಚ್ಚಾಗಿ ಪ್ರಕಾಶಕ್ಕೆ ಬರುವುದೆಂದು ಧಾರಾಳವಾಗಿ ಹೇಳಬಲ್ಲೆನು.

ಮತ್ತು—ಈ ಸ್ತುತ್ಯರ್ಹವಾದ ಸೇವಾಸಮಾಜವು, ಯಾರ ಅಧ್ಯಕ್ಷತೆಗೆ ಒಳಪಟ್ಟಿರುವುದೋ—ಆ—ನಮ್ಮ ಸನ್ಮಾನನೀಯ ಭಗಿನಿಯರಾದ ಶ್ರೀಮತಿ,ಸೌಭಾಗ್ಯವತಿ—ಪಾರ್ವತಾಂಬಾಯವರ ವಾತ್ಸಲ್ಯವಿಶೇಷದಿಂದ ನನಗೆ ಇಂದಿನ ಈ ತಮ್ಮ ಸಂದರ್ಶನದ ಮತ್ತು ತಮ್ಮೊಲಕಪ್ರಾಪ್ತವಾದ ಪ್ರಸಂಗರೂಪದ ಸೋದರೀ ಸೇವೆಯೂ—ಅಲಭ್ಯಲಾಭವಾಗಿರುವುದೆಂದು, ಇಲ್ಲಿ ನಾನು ಬಾಯ್ದೆರೆದು ಹೇಳಬೇಕಾಗಿಲ್ಲವಷ್ಟೆ. ನನ್ನ ಪರಮಪ್ರಿಯಭಗಿನಿಯರೇ!

ಇಷ್ಟು ದೂರ ಸ್ವಾತಂತ್ರ್ಯವನ್ನು ವಹಿಸಿದುದಕ್ಕಾಗಿ ನೀವು ಮುಳಿಯಲಾರಿರೆಂದು ನನಗೆ ನಂಬಿಕೆಯಿರುವುದರಿಂದ ಮತ್ತೆ ನನ್ನ ಸ್ವವಿ

Digitized by ROJA MUTHIAH RESEARCH LIBRARY

ಷಯವನ್ನು ಕುರಿತು ನಾಲ್ಕಾರುಮಾತುಗಳನ್ನು ಹೇಳಿ, ಈ ಲೇಖನವನ್ನು ಪೂರ್ಣಗೊಳಿಸುವೆನು. ಏನೆಂದರೆ—ಹಿತೈಷಿಗಳೂ, ದೇಶಸೇವೆಯಲ್ಲಿ ಬದ್ಧಾದರರೂ, ಲೋಕಾನುಭವದಲ್ಲಿ ಪಂಡಿತಂಮನ್ಯರೂ ಆಗಿರುವ ನಮ್ಮ ಗುರುಜನರಿಂದ ನಿರೂಪಿಸಲ್ಪಟ್ಟ ಈ ಬಗೆಯ ಸೇವಾಕಾರ್ಯದಲ್ಲಿ, ಎಂದರೆ—ಕೇವಲ ದೇಶಭಾಷಾಮಾತೃ ಸೇವಾಕಾರ್ಯದಲ್ಲಿ ತೊಡಗಿ ಸತೀಹಿತೈಷಿಣೀಗ್ರಂಥಮಾಲಾ ಪರಿಚಾಲನವೃತ್ತಿಯನ್ನವಲಂಬಿಸಿ, ಲೇಖನಕ್ರಿಯಾರೂಪದಿಂದ ನಮ್ಮ ದೇಶಭಗಿನಿಯರನ್ನು ಸೇವಿಸಲು ಪ್ರಯತ್ನಿಸಿ, ಇಂದಿಗೆ ಮೂರುವರ್ಷಗಳಾದವು. ಈ ಮೂರುವರ್ಷದ ನನ್ನ ಸೇವೆಯಲ್ಲಿ, ನನ್ನ ಪರಮಪ್ರಿಯರಾದ ದೇಶಭಗಿನಿಯರಿಗೆ ಎಷ್ಟುಮಟ್ಟಿನ ಉಪಯೋಗವಾಗಿದೆಯೆಂಬುದು ನನಗಿನ್ನೂ ತಿಳಿಯದಿದ್ದರೂ , ಅಷ್ಟಿಷ್ಟಾಗಿ ಉಪಯೋಗವಾಗದೆ ಇರಲಾರದೆಂಬ ಭರವಸೆಯೇನೋ ಇದ್ದೇ ಇರುವುದು. ಆ ಭರವಸೆಯಿಂದಲೇ ನನ್ನೀ ಸೇವಾಕಾರ್ಯವೂ ಕ್ರಮವಾಗಿ ಮುಂಬರಿಯುತ್ತ ಬರುತ್ತಿರುವುದು.

ಆದರೆ ' ಬಿನ್ನರುಚಿರ್ಹಿಲೋಕಃ, ಎಂಬ ಮಾತಿನಂತೆ ಕೆಲವು ಮಂದಿ ಮಹಿಳೆಯರು, ಈ ಬಗೆಯಾದ ಲೇಖನ-ವಾಚನ-ಪರಿಶ್ರಮದಿಂದ ಫಲವೇನೂ ಇಲ್ಲವೆಂದೂ, ತಾನಾಗಿಯೇ ಬರಬಹುದಾದ ಕಾರ್ಯಕಲಾಪಗಳನ್ನು ಕುರಿತು , ಹೀಗೆಮಾಡು-ಹಾಗೆಮಾಡೆಂದು ' ಹೇಳುವುದು ಹುಚ್ಚುತನವೆಂದೂ, ಸಂಘಗಳನ್ನು ಏರ್ಪಡಿಸಿ ಭಾಷಣ ಮಾಡುವುದು ಬರಿಯ ವಾಗಾಡಂಭರವೆಂದೂ. ಇನ್ನೂ ಹಲವುಬಗೆಯಾಗಿ ಪ್ರತ್ಯಕ್ಷಪರೋಕ್ಷದಲ್ಲಿ ಆಕ್ಷೇಪಿಸಿದ್ದರು. ಆದಮಾತ್ರಕ್ಕೆ ನಾನು ನನ್ನ ವೃತ್ತಿಯನ್ನು ಬಿಡಲಿಲ್ಲ. ನಮ್ಮ ಪೂರ್ವಜರಿಂದ ಅನುಸರಿಸಲ್ಪಟ್ಟು



ಬಂದಿರುವ ನೀತಿಮಾರ್ಗವನ್ನು ನಾವು ಮೀರುವುದು ಸರಿಯಲ್ಲವೆಂಬುದನ್ನು ನಿರ್ಧರಿಸಲು, ಅದನ್ನೇಕಾರಣವಾಗಿಟ್ಟುಕೊಂಡು, ನಮ್ಮ ಮುಂದಿನ ಮಕ್ಕಳಿಗೆ ನಾವು ಕೊಡಬೇಕಾದಶಿಕ್ಷಣವೂ, ಅಭ್ಯಾಸವೂ, ಎಂತಹದಾಗಿರಬೇಕೆಂಬುದೇಮೊದಲಾಗಿ , ನಮ್ಮ ಸ್ತ್ರೀಸಮಾಜಕ್ಕೆ ಮುಖ್ಯಮುಖ್ಯವಾದ ಸುಧಾರಣಾವಿಷಯಗಳನ್ನು ಪ್ರತಿಪಾದಿಸುತ್ತಿರುವ— 'ಮಾತೃನಂದಿನಿ ಎಂಬ ಗ್ರಥವನ್ನು ಮಾಲೆಯ 6 ನೆಯದಾಗಿ ಪ್ರಚಾರಕ್ಕೆ ತಂದೆನು. ಅಲ್ಲದೆ ಈವರೆಗೆ ಗ್ರಂಥ ಲೇಖನರೂಪದಿಂದ ಸೋದರೀಸೇವೆಯನ್ನು ಮಾಡುತ್ತಿದ್ದುದು ಸಾಲದೆಂದು, "ಮಹಿಳಾಭ್ಯುದಯ"ವೆಂಬ ಹೆಸರಿನಿಂದ ಒಂದು ಸ್ತ್ರೀಸಮಾಜವನ್ನು ನಿರ್ಮಿಸಬೇಕೆಂದು ಪ್ರಯತ್ನಪಟ್ಟೆನು. ಆದರೆ ಅಕಾಲವೆಂದೋ,—ಇಲ್ಲವೆ—ನಮ್ಮವರ ಸಹಾನುಭೂತಿಯು ಅಷ್ಟಾಗಿ ದೊರೆಯದಿದ್ದುದರಿಂದಲೋ ಹೇಗೊ ಉದ್ದೇಶವು ಈ ವರೆಗೂ ಸಿದ್ಧಿಯನ್ನು ಹೊಂದಿಲ್ಲ.

ಸಂಘ ನಿರ್ಮಾಣವು ದುಸ್ಸಾಧ್ಯವಾಗಿ ಪರಿಣಮಿಸಿದರೂ, ಪತ್ರಿಕಾಮುಖದಿಂದಲಾದರೂ, ಈ ಕಾರ್ಯವನ್ನು ನಿರ್ವಹಿಸಬೇಕೆಂಬ ಉದ್ದೇಶವೂ, ಅದಕ್ಕನುಗುಣವಾಗಿ ಗುರುಜನರ ಮತ್ತು ದೇಶಬಾಂಧವರ ಪ್ರೋತ್ಸಾಹವೂ ಮುಂದಾಗುತ್ತಿದ್ದು ತಕ್ಕಷ್ಟು ಪ್ರಯತ್ನಗಳೂ ನಡೆದಿರುವುವು. ಈಗಾಗಲೇ ಪತ್ರಿಕೆಯ ಸನ್ಮಾನಪುಸ್ತಕವು. ಮುದ್ರಣವಾಗಿರುವುದಲ್ಲದೆ,—ನಮ್ಮ ದೇಶ ಭಗಿನಿಯರ ಸಹಾನುಭೂತಿಯೂ, ದೇಶಬಂಧುಗಳ ಪ್ರೋತ್ಸಾಹವೂ ದೊರೆತಂತೆಲ್ಲಾ—ಪತ್ರಿಕೆಯೂ ತನ್ನಕರ್ತವ್ಯವನ್ನು ಸಾರ್ಥಕ್ಯ ಪಡಿಸಿಕೊಳ್ಳಲಿಕ್ಕೆಂದು ಹೊರಹೊರಡುವುದರಲ್ಲಿ ಉತ್ಸುಕವಾಗಿರುವದು.

Digitized by ROJA MUTHIAH RESEARCH LIBRARY

ಮತ್ತೇನು ಹೇಳಲಿ!—ಭಗಿನಿಯರೇ!

ನಾನು ತಮ್ಮ ಸಮ್ಮುಖದಲ್ಲಿ ವಿಶೇಷವಾಗಿ ಹೇಳುವಷ್ಟರ ಅರ್ಹತೆಯುಳ್ಳವಳಾಗಿಲ್ಲವಾದರೂ, ಸೇವಾಸದನವೆಂದು ಪ್ರಸಿದ್ಧಿಹೊಂದಿರುವ ಈ ಪವಿತ್ರಸ್ಥಾನದಲ್ಲಿ ನಾವೆಲ್ಲರೂ ಸೇವಕರೇ ಆಗಿರುವೆವೆಂದೂ, ಸೇವಾಕಾರ್ಯದಲ್ಲಿ ತೊಡಗಿರುವ ನಾವೆಲ್ಲರೂ ಸೋದರಿಯರೇ ಆಗಿರುವುದರಿಂದ ನಮಗೆ ಭೇದಕಲ್ಪನೆಗೆ ಇಲ್ಲಿ ಅವಕಾಶವಿಲ್ಲವೆಂದೂ ಸೂಚಿಸುವ ತಮ್ಮಗಳ ಸದ್ಭಾವನೆಯಿಂದ ಇಷ್ಟು ಧೈರ್ಯವಾಗಿ ಹೇಳಿರುವೆನು. ಮೊದಲನೆಯ ದಿನದಲ್ಲಿಯೇ ಇಷ್ಟು ದೂರ ಹೇಳಿದುದರಿಂದ ಬೇಸರವಾಗಿರಬಹುದೆಂದು ಭಾವಿಸಿ ಕ್ಷಮೆಯನ್ನು ಕೋರುವುದಲ್ಲದೆ, ಮುಂದೆ ಇಂತಹ ಸುಯೋಗವೇನಾದರೂ ಲಭಿಸುವುದಾದರೆ, ಮತ್ತು ತಮ್ಮ ಸಂದರ್ಶನ ಸಂಭಾಷಣಗಳ ಲಾಭವನ್ನು ಸಾರ್ಥಕ್ಯಪಡಿಸುವುದಲ್ಲದೆ, ಇಂದಿನ ಈ ಸೇವಾವಿಚಾರಪರವಾದ ನನ್ನೀ ಅಲ್ಪಕೃತಿಯು ಸೋದರಿಯರಿಗೆ ಅಷ್ಟಿಷ್ಟಾದರೂ ಸಾಫಲ್ಯಗೊಳಿಸುವಂತೆಯೂ ನಮ್ಮ ನಮ್ಮಲ್ಲಿ ಪರಸ್ಪರ ಅಭಿನ್ನವಾದ ಈ ಸೋದರೀಭಾವನೆಯು ಉತ್ತರೋತ್ತರಾಭಿವೃದ್ಧಿ ಹೊಂದಿ ಸೇವಾಕಾರ್ಯವನ್ನು ತೃಪ್ತಿಕರವಾಗಿ ನೆರವೇರಿಸುತ್ತ ಬರುವಂತೆಯೂ ಅನುಗ್ರಹಿಸೆಂದು ಆ ಪರಮಾತ್ಮನನ್ನೇ ಅನನ್ಯ ಭಾವದಿಂದ ಪ್ರಾರ್ಥಿಸುವೆನು.

ಭಗವಂತನು ಅನುಗ್ರಹಿಸಲಿ !

ಕೃಷ್ಣಾರ್ಪಣಮಸ್ತು

ತಾ|| ೨೦-೫-೧೯೧೬
ಬೆಂಗಳೂರು.

ದೇಶಭಗಿನಿ
ತಿರುಮಲಾಂಬಾ.

Digitized by ROJA MUTHIAH RESEARCH LIBRARY

**ದಿನಾಂಕ ಸೂಚಿ**

## ಕನ್ನಡ ಸಾಹಿತ್ಯ ಪರಿಷತ್ತು

**ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮**

**ಸರಸ್ವತಿ ಭಂಡಾರ**

ವಿ. ಸೂ: ೧೫ ದಿನಗಳಿಗಿಂತ ಹೆಚ್ಚುಕಾಲ ಯಾರು ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
|---|---|
| | |

**ಪುಸ್ತಕಸೂಚಿ**

ವ. ಸಂ: R N16

ಕ್ರ. ಸಂ: 1041.

[illegible]ಕ: ತಿರುಮಲಮ್ಮ ( )

[illegible]

ವ. ಸಂ: R N16

ಕ್ರ. ಸಂ: 1041.

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY